**ಪಾಠ–6** **ಅಕ್ಟೋಬರ್ 30–ನವೆಂಬರ್ 5**

# ಇದಕ್ಕಿಂತಲೂ ಶ್ರೇಷ್ಠವಾದ ಜನಾಂಗ ಉಂಟೋ?



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ :** ಧರ್ಮೋಪದೇಶಕಾಂಡ 4:1–9, ಮತ್ತಾಯ 15:1–9, ಅರಣ್ಯಕಾಂಡ 25:1–15, 1 ಕೊರಿಂಥದವರಿಗೆ 10:13, ಧರ್ಮೋಪದೇಶಕಾಂಡ 4:32–35, ಮತ್ತಾಯ 5:13–16.

**ಸ್ಮರಣವಾಕ್ಯ : "ನಾನು ಈ ಹೊತ್ತು ನಿಮ್ಮ ಮುಂದೆ ಇಡುವ ಇಂಥ ನ್ಯಾಯವಾದ ಅಜ್ಞಾವಿಧಿಗಳುಳ್ಳ, ಈ ಧರ್ಮಶಾಸ್ತ್ರಕ್ಕೆ ಸಮನವಾದದ್ದು ಬೇರೆ ಯಾವ ಜನಾಂಗಕ್ಕೆ ಉಂಟು?"** (ಧರ್ಮೋಪದೇಶಕಾಂಡ 4:8).

ಧರ್ಮೋಪದೇಶಕಾಂಡ ಮೊದಲ ಮೂರು ಅಧ್ಯಾಯಗಳು ಮೂಲಭೂತವಾಗಿ ಐತಿಹಾಸಿಕ ಪಾಠಗಳಾಗಿದೆ. ಹಿಂದೆ ಹೇಗೆ ಇದ್ದರು ಎಂಬುದನ್ನು ಜನರಿಗೆ ನೆನಪಿಸಿಕೊಳ್ಳಲು ತಿಳಿಸುತ್ತದೆ. ನಾಲ್ಕನೆ ಅಧ್ಯಾಯಕ್ಕೆ ಬರುವುದೊಳಗಾಗಿ ಐತಿಹಾಸಿಕ ಪಾಠದಿಂದ ಸಂದೇಶದ ಮಾದರಿಗೆ ಬದಲಿಸುತ್ತದೆ. ಘಟನೆಗಳನ್ನೂ ವಿವರಿಸುವುದು ಬರಿ ಐತಿಹಾಸವನ್ನು ತಿಳಿದುಕೊಳ್ಳುವುದಕ್ಕೆ ಮಾತ್ರವಲ್ಲದೆ ದೇವರು ಅವರಿಗೆ ಹೇಗೆ ತನ್ನ ಶಕ್ತಿಯನ್ನು ಮತ್ತು ದೇವರ ಕೃಪೆಯನ್ನು ಅವರ ಮಧ್ಯ ಹೇಗೆ ಕೆಲಸ ನಡಿಸಿತು ಎಂದು ತಿಳಿಸುವ ಉದ್ದೇಶದಿಂದ ಅನೇಕ ಬಾರಿ ಅವರು ಅವಿವೇಕದಿಂದ ವರ್ತಿಸಿದಾಗ್ಯೂ ಕರ್ತನು ಅವರ ಸಂಗಡ ತನ್ನ ಒಡಂಬಡಿಕೆಯನ್ನು ಗೌರವಿಸುವವನಾಗಿದ್ದಾನೆ. ನಾಲ್ಕನೆ ಅಧ್ಯಾಯದಲ್ಲಿ ಇಬ್ರಿಯ ಭಾಷೆಯ ಪದ "ವಿ

* **ನವೆಂಬರ್ 6ನೇ ಸಬ್ಬತ್ತಿನ ಸಿದ್ಧತೆಗಾಗಿ ಈ ವಾರದ ಪಾಠ ಅಧ್ಯಯನ ಮಾಡಿರಿ.**

ಅಟ್ಟಹ" ಅದನ್ನು ಹೀಗೆ ಭಾಷಾಂತರಗೊಳಿಸಬಹುದು "ಮತ್ತು ಈಗ" ಅಥವಾ "ಎಷ್ಟರ ಮಟ್ಟಿಗೆ ಈಗ" ಎಂದು.

ಅವರ ಇತಿಹಾಸವನ್ನು ಮರುಪರಿಶೀಲಿಸಿ, ದೇವರು ಅವರನ್ನು ಇಲ್ಲಿಯ ತನಕ ತಂದ ರೀತಿಯನ್ನು ಜ್ಞಾಪಕಪಡಕೊಳ್ಳತಕ್ಕದ್ದು. ಆದುದರಿಂದ "ಎಷ್ಟರ ಮಟ್ಟಿಗೆ" ದೇವರು ಹೇಳುವುದನ್ನು ಅವರು ಮಾಡತಕ್ಕದ್ದು (ಧರ್ಮೋಪದೇಶಕಾಂಡ 10:12 ನ್ನು ಪ್ರತಿಕ್ರಿಯಾಗಿ ನೋಡಿ).

ಪ್ರಥಮ ಕ್ರಿಯಾಪದವು "ಮತ್ತು ಈಗ" ಆದ ಮೇಲೆ ಕಾಣಿಸುವುದು "ಶಮ". ಇದೆ ಕ್ರಿಯಾಪದವು ಪ್ರಾರಂಭದಲ್ಲಿ ಶಮ ಪ್ರಾರ್ಥನೆಯಲ್ಲಿ ಉಪಯೋಗಿಸಲ್ಪಟ್ಟಿದೆ. ಅದರ ಅರ್ಥ "ಕೇಳಿ" ಅಥವಾ ಆಲಿಸು ಅಥವಾ "ವಿಧೇಯನಾಗು". ಈ ಕ್ರಿಯಾಪದವನ್ನು ಧರ್ಮೋಪದೇಶಕಾಂಡ ಉದ್ದಕ್ಕೂ ಮರುಕಳಿಸುತ್ತದೆ.

ಆದುದರಿಂದ ಅಧ್ಯಯನವು ಈಗೆ ಪ್ರಾರಂಭವಾಗುತ್ತದೆ. "ಇಸ್ರಾಯೇಲ್ಯರೇ, ಕೇಳಿರಿ ನೀವು ಬದುಕಿಕೊಂಡು ನಿಮ್ಮ ಪಿತೃಗಳ ದೇವರಾದ ಯೆಹೋವನು ನಿಮಗೆ ಕೊಡುವ ದೇಶವನ್ನು ಸೇರಿ ಸ್ವಾಧೀನ ಮಾಡಿಕೊಳ್ಳುವಂತೆ ನಾನು ನಿಮಗೆ ಬೋಧಿಸುವ ಆಜ್ಞಾವಿಧಿಗಳನ್ನು ಗಮನಿಸಿ ಆಚರಿಸಬೇಕು...." ಧರ್ಮೋಪದೇಶಕಾಂಡ 4:1.

**ಭಾನುವಾರ** **ಅಕ್ಟೋಬರ್ 31**

## ಕೂಡಿಸಬಾರದು ಅಥವಾ ತೆಗೆದುಬಿಡಬಾರದು

ಧರ್ಮೋಪದೇಶಕಾಂಡ 4:1,2 ಅನ್ನು ಓದಿ. ಕಟಳೆ ಮತ್ತು ನ್ಯಾಯತೀರ್ಪು ಅನ್ನು ಕುರಿತು ಕರ್ತನು ಅವರಿಗೆ ಯಾವ ನಿರ್ದಿಷ್ಟವಾದ ಎಚ್ಚರಿಕೆಯನ್ನು ಕೊಟ್ಟಿದ್ದಾನೆ? ಮತ್ತು ಯಾಕೆ ಈ ವಿಷಯವನ್ನು ಎಚ್ಚರಿಸಿದ್ದಾನೆ? (ಧರ್ಮೋಪದೇಶಕಾಂಡ 12:32 ನೋಡಿ).

"ಕಟ್ಟಳೆ ಮತ್ತು ನ್ಯಾಯತೀರ್ಪುಗಳಿಗೆ" ನೀವು ವಿಧೇಯರಾಗಿಬೇಕು ಎಂದು ಕರ್ತನು ಹೇಳುತ್ತಾನೆ. ಮತ್ತು ಅದಕ್ಕೆ ಕೂಡಿಸಬಾರದು ಅಥವಾ ತೆಗೆದುಬಿಡಬಾರದು. ಯಾವ ಕಾರಣಕ್ಕಾಗಿ ಇದನ್ನು ಹೇಳಿದ? ಹೇಗೂ ಯಾಕೆ ದೇವರ ಆಜ್ಞೆಗಳನ್ನು ಬದಲಾಯಿಸಲು ಬಯಸುವರು? ಖಂಡಿತವಾಗಿಯೂ ನಮಗೆ ಉತ್ತರ ಗೊತ್ತಿದೆ.

"ಸೈತಾನನು, ಪರಲೋಕದಲ್ಲಿ ದೇವರ ಆಜ್ಞೆಯನ್ನು ಬದಲಾಯಿಸಲು ಪ್ರಾರಂಭಿಸಿದ ಕೆಲಸವನ್ನು ಜರುಗಿಸುವ ಸಲುವಾಗಿ ಸತತವಾದ ಪ್ರಯತ್ನ ಮಾಡುತ್ತಿದ್ದಾನೆ. ಪರಲೋಕದಲ್ಲಿ ಸೈತಾನನು ಬೀಳುವ ಮುನ್ನ, ದೇವರ ಆಜ್ಞೆಯು ದೋಷಯುಕ್ತವಾದದ್ದು ಮತ್ತು ಅದನ್ನು ಪುನರಧ್ಯಯನ ಮಾಡತಕ್ಕದೆಂದು ನಿರೂಪಿಸಿರುವುದನ್ನು ಲೋಕವು ತನ್ನ ತತ್ವವನ್ನು ನಂಬುವ ಹಾಗೆ ಮಾಡುವುದರಲ್ಲಿ ಯಶಸ್ಸು ಆಗಿದ್ದಾನೆ. ಇದೇ ತಪ್ಪನ್ನು ಬಹುತೇಕ ನಿರ್ದಿಷ್ಟವಾದ ಕ್ರೈಸ್ತ ಸಭೆಗಳು ಅವರ ಭಾವನೆಗಳಿಂದ ಅಥವಾ ಅವರ ಪದಗಳಲ್ಲಿ ಆ ತಪ್ಪನ್ನು ಅಂಗೀಕರಿಸಿದ್ದೇವೆಂದು ತೋರಿಸಿದ್ದಾರೆ" – ಎಲ್ಲೆನ್ ಜಿ ವೈಟ್ ಸೆಲೆಕ್ಟೆಡ್ ಮೆಸೇಜಸ್, ಪುಸ್ತಕ 2, ಪುಟ107.

ಪುರಾತನ ಇಸ್ರಾಯೇಲ್ಯರ ಇತಿಹಾಸವನ್ನು ಯೋಚಿಸುವಾಗ ಅನೇಕ ರೀತಿ ಅವರು ಸಮಸ್ಯೆಗಳಿಗೆ ಸಿಕ್ಕಿಕೊಂಡರು ಯಾಕೆಂದರೆ ಅವರ ಒಂದಲ್ಲ ಒಂದು ರೀತಿ ಆ ಆಜ್ಞೆಯನ್ನು ಆದೇಶವನ್ನು ಕಡೆಗಣಿಸುತ್ತಾರೆ. ಅದರ ಅರ್ಥ ಎಲ್ಲಾ ಪ್ರಾಯೋಗಿಕ ಉದ್ದೇಶಕ್ಕಾಗಿ ಆಜ್ಞೆಯಿಂದ ತೆಗೆದುಹಾಕಿದಂತೆ ಆದರೆ ಅದಕ್ಕೆ ಸೇರಿಸಿದಂತೆಯೂ ಸಹ ಹೇಗೆಂದರೆ ಆಜ್ಞೆಯಲ್ಲಿ ತಿಳಿಸಿದಂತಹ ಅಭ್ಯಾಸಗಳನ್ನು ಕೂಡಿಸುವ ಮುಖಾಂತರ ಅಂತ್ಯದಲ್ಲಿ ಆಜ್ಞೆಯನ್ನು ಉಲ್ಲಂಘಿಸಿದ ಹಾಗೆ ಆಯಿತು.

ಮತ್ತಾಯ 15:1–9ನ್ನು ಓದಿ. ಮೋಶೆಯು ಹೇಗೆ ಇಸ್ರಾಯೇಲ್ ಮಕ್ಕಳಿಗೆ ನೀಡಿದ ಎಚ್ಚರಿಕೆಯನ್ನು ಯಾವ ಹಿನ್ನೆಲೆಯಲ್ಲಿ ಇಲ್ಲಿ ಉದಾರಣಯಾಗಿ ಕಾಣಬಹುದು?

ಇಸ್ರಾಯೇಲರ ವಾಗ್ದಾನ ಮಾಡಿದ ಭೂಮಿಯನ್ನು ಪಡೆದಾಗ ಅವರು ಪದೇ ಪದೇ ನೇರ ಎಚ್ಚರಿಕೆಯನ್ನು ಕಡೆಗಣಿಸಿದರು. ಉದಾಹರಣೆಗೆ, ವಿಗ್ರಹಾರಾಧನೆಗೆ ವಿಷಯದಲ್ಲಿ ಇದರ ಪ್ರಯುಕ್ತ ಅವರು ಅನ್ಯ ಆಚರಣೆಗಳನ್ನು ಪಾಲಿಸಿದರು. ಯೆಹೋವ ದೇವರನ್ನು ಆರಾಧಿಸುವ ವಿಷಯದಲ್ಲೂ ಕ್ರಿಸ್ತನ ಸಮಯದಲ್ಲೂ ಅವರು ಇನ್ನೂ ಹೆಚ್ಚು ಮಾನವ ಆಚಾರಗಳು ಅಥವಾ ಸಂಪ್ರದಾಯಗಳನ್ನು ಸೇರಿಸಿಕೊಂಡರು.

ಯೇಸು ತಾನೇ ಹೇಳಿದ "ನೀವು ದೇವರ ಆಜ್ಞೆಯನ್ನು ನಿರರ್ಥ ಮಾಡುತ್ತೀರಿ" ಎಂದು.

ಕೂಡಿಸುವದಾಗಲಿ ಅಥವಾ ತೆಗೆದುಹಾಕುವುದಾಗಲಿ ಯಾವುದೇ ಮಾರ್ಗದಲ್ಲಿ, ಆಜ್ಞೆಯನ್ನು ಬದಲಾಯಿಸಿದರು. ಅದರ ಪ್ರಯುಕ್ತವಾಗಿ ರಾಷ್ಟ್ರವು ಅದರ ಪರಿಣಾಮದಿಂದ ತೊಂದರೆಗೊಳಗಾದರು.ದೇವರು ಹೇಳಿದ ಯಾವ ಕೆಲಸದಲ್ಲಿ ಎಚ್ಚರಿಕೆಯನ್ನು ವಹಿಸತಕ್ಕದ್ದು?

**ಸೋಮವಾರ** **ನವೆಂಬರ್ 1**

## ಪೆಗೋರದ ಬಾಳ

ಧರ್ಮೋಪದೇಶಕಾಂಡ 4:3,4 ರಲ್ಲಿ ಇಸ್ರಾಯೇಲ್ಯರ ಜನರಿಗೆ ಇನ್ನೂ ಸ್ವಲ್ಪ ಐತಿಹಾಸಿಕ ಪಾಠಗಳನ್ನು ಕೊಡಲಾಗಿದೆ. ಭೂತಕಾಲವನ್ನು ನೆನಪಿಗೆ ತರವು ಕಾರ್ಯವನ್ನು ಮಾಡುವ ಸಲುವಾಗಿ ಹಾಗೂ ಆತ್ಮೀಕ ಮತ್ತು ಕಾರ್ಯಸೂಚಿತ ಸತ್ಯಗಳನ್ನು ಅವರು ಕಲಿಯುವ ಸಲುವಾಗಿ ಅರಣ್ಯಕಾಂಡ 25:1–5ನ್ನು ಓದಿ. ಏನು ಆಯಿತು ಮತ್ತು ಯಾವ ಆತ್ಮೀಕ ಮತ್ತು ಕಾರ್ಯಾತ್ಮಕ ಸತ್ಯಗಳನ್ನು ಈ ಅಪಜಯದಿಂದ ಜನರು ತೆಗೆದುಕೊಳ್ಳಬೇಕಿತ್ತು.

ಇಸ್ರಾಯೇಲ್ಯರು ತಮ್ಮ ಸುತ್ತ ಇರುವ ಅನ್ಯರಾಜ್ಯಗಳನ್ನು ಸಂಪೂರ್ಣವಾಗಿ ನಾಶಮಾಡಿದ ಕಥೆಗಳನ್ನು ಕೇಳುವುದು ಅಹಿತಕರವಾದಾಗ್ಯೂ ಈ ವರದಿಗಳು ತಿಳಿಸುವುದೇನೆಂದರೆ ಇವುಗಳ ಹಿಂದೆ ಆಜ್ಞೆ ಮತ್ತು ಏಕದೇವರಿಗೆ ಸಾಕ್ಷಿಗಳಾಗಿರ–ಬೇಕಿತ್ತು. ನಿಜ ದೇವರ ಆರಾಧನೆಗೆ ಅವರು ಮಾದರಿಯಾಗಬೇಕಿತ್ತು. ಈಗಾಗುವ ಬದಲು ಅವರು ಸುತ್ತ ಇರುವ ಅನ್ಯದೇವರಗಳಿಗೆ ಅಂಟಿಕೊಂಡರು. ಈಗೆ ಮಾಡಿ ದೇವರನ್ನು ಲೋಕಕ್ಕೆ ಪ್ರತಿನಿಧಿಸುವ ಬದಲು ಅವರು ದೇವರಿಗೆ ವಿರುದ್ಧವಾಗಿ ಪ್ರತಿಭಟಿಸಿದರು.

"ಸೂಳೆಗಾರಿಕೆಗೆ ಎಸಗು" ಎಂಬ ನುಡಿಗಟ್ಟು ಇದ್ದಾಗ್ಯೂ ಸಹಜವಾಗಿ ಅದು ಒಂದು ಆತ್ಮೀಯ ಸೂಳೆಗಾರಿಕೆ ಎಂಬ ಅರ್ಥ ಕೊಡುತ್ತದೆ. ಇದರಲ್ಲಿ ಇಸ್ರಾಯೇಲ್ಯರು ಅನ್ಯದೇವರುಗಳ ಮತ್ತು ಆಚಾರಗಳ ಹಿಂದೆ ಹೋದರು (ಹೋಶೇಯನು 4:12–14) ಅನ್ನು ನೋಡಿ. ಈ ಸನ್ನಿವೇಶದಲ್ಲಿ ಜನರು ಲೈಂಗಿಕ ಪಾಪಕ್ಕೆ ಒಳಗಾದರೆಂದು ಸೂಚಿಸುತ್ತದೆ. ಇಲ್ಲಿ ಮತ್ತೆ ಸೈತಾನನು ಮಾನವನ ಸೋಲನ್ನು ಅನುಕೂಲ ಮಾಡಿಕೊಂಡು, ಅನ್ಯ ಸ್ತ್ರೀಯರು ಪುರುಷರನ್ನು ಪ್ರೇರಿಸಿ ಅವರೇ ಸ್ವತಃ ವ್ಯಾಮೋಹಕಗೊಂಡರು.

ಅವರ ಶಾರೀರಿಕ ಸೂಳೆಗಾರಿಕೆಯು ಆತ್ಮೀಯ ಸೂಳೆಗಾರಿಕೆ ನಡೆಸಿದರಲ್ಲಿ ಯಾವ ಸಂದೇಹ ಇಲ್ಲ. ಜನರು ಈ ಪಾಪದಲ್ಲಿ ತೊಡಗಿದವರು ಅನ್ಯ ಆರಾಧನೆಯ ಅಭ್ಯಾಸವಾಗಿ. "ಪೆಗೋರನ ಬಾಳನಲ್ಲಿ ಸೇರಿಕೊಂಡರು". ಈ ಸುಳ್ಳು ದೇವರುಗಳನ್ನು ಹೊಂದಿಕೊಂಡು ಅವುಗಳಿಗೆ ಬಲಿ ಕೊಟ್ಟರು. ಕಾಮೋದ್ರೇಕದಿಂದ ಮತ್ತು ಭೋಗದಿಂದ ಮದವೇರಿ ಎಲ್ಲವನ್ನೂ ಬಿಡಲು ಒಪ್ಪಿಸಿಕೊಟ್ಟರು.

ಇಷ್ಟು ಸುಲಭವಾಗಿ ಆಗಲು ಹೇಗೆ ಸಾಧ್ಯವಾಯಿತು? ಅವರ ಮೊದಲನೇ ಪಾಪಕ್ಕೂ ಮನಸಾಕ್ಷಿಯನ್ನು ಕಠಿಣ ಮಾಡಿಕೊಂಡು. ಶಾರೀರಿಕ ಪಾಪವು ಪಕ್ವವಾಗಿ ಆತ್ಮೀಕ ಪಾಪಕ್ಕೆ ಒಳಗಾದರು. ಆ ರೀತಿ ಮಾಡುವುದು ಸೈತಾನನ ಗುರಿಯಾಗಿತ್ತು. ಅವರು ತಮ್ಮ ಅಷ್ಟು ತಗ್ಗಿಸಿಕೊಂಡು ವಚನದ ಮೇರೆಗೆ ಒಬ್ಬ ಪುರುಷನು ಮಿದ್ಯನರ ಸ್ತ್ರೀಯನ್ನು ಇಸ್ರಾಯೇಲ್ಯರ ಪಾಳಯಕ್ಕೆ ಮೋಶೆಯು ಮತ್ತು ಜನರು ಪರ್ಣಶಾಲೆಯ ಹೊರಗೆ ಗೋಳಾಡುತ್ತಿದ್ದರು. ಅವರ ಮುಂದೆಯೇ ಕರೆದುಕೊಂಡು ಬಂದನು.

ನಮ್ಮ ಮನಸ್ಸು ಮತ್ತು ದೇಹವು ನಿಕಟವಾಗಿ ಕೂಡಿಸಿಕೊಂಡಿದೆ. ಒಬ್ಬರಿಗೆ ತಗಲಿದರೆ ಮತ್ತೊಬ್ಬರಿಗೆ ತಗಲುತ್ತದೆ. ಈ ಕಥೆಯಿಂದ ಯಾವ ವಿಷಯವನ್ನು ಕಲಿಯಬಹುದು. ಹೇಗೆ ಈ ಲೋಲುಪತೆಯು ನಮ್ಮ ಆತ್ಮೀಯ ಅಭಿವೃದ್ಧಿಗೆ ಎಷ್ಟು ಅಪಾಯಕರವಾಗಿದೆ?

**ಮಂಗಳವಾರ ನವೆಂಬರ್ 2**

## ನಿನ್ನ ಕರ್ತನಾದ ದೇವರನ್ನು ಬಲವಾಗಿ ಹಿಡಿದುಕೋ

ಪೆಗೂರನ ಬಾಳನ ಪಾಪದಲ್ಲಿ ಸಾವಿರಗಟ್ಟಲೆ ಸತ್ತರು. ಪೆಗೂರನ ಬಾಳನನ್ನು ಹಿಂಬಾಲಿಸದ ಎಲ್ಲಾ ಪುರುಷರು ನಾಶವಾದರು. ಹೇಗೂ ಅನೇಕರು ಈ ಮತಭ್ರಷ್ಟತೆಯನ್ನು ಅನುಸರಿಸಲಿಲ್ಲ.

ಅವರು ಯಾರು? "ನಿಮ್ಮ ದೇವರಾದ ಯೆಹೋವನನ್ನು ಹೊಂದಿಕೊಂಡವರಾದ ನೀವಾದರೋ ಇಂದಿನವರೆಗೂ ಉಳಿದುಕೊಂಡಿದ್ದೀರಿ" (ಧರ್ಮೋಪದೇಶಕಾಂಡ 4:4). ಯಾರು ಈ ಪಾಪಕ್ಕೊಳಗಾದರು ಮತ್ತು ಯಾರು ಈ ಪಾಪವನ್ನು ಮಾಡಲಿಲ್ಲ ಎಂಬ ವ್ಯತ್ಯಾಸವನ್ನು ಹೇಗೆ ಈ ವಚನದಿಂದ ವಿವರಿಸಬಲ್ಲಿರಿ? ನಮ್ಮ ಜೀವಿತದಲ್ಲಿ ದೇವರ ಶಕ್ತಿ ಮತ್ತು ಪಾಪ ಮತ್ತು ಶೋಧನೆಯನ್ನು ಕುರಿತು ನಾವು ಯಾವ ಮುಖ್ಯವಾದ ಸಂದೇಶವನ್ನು ಪಡೆಯಬಹುದು?

ಪೆಗೊರನ ಬಾಳನನ್ನು ಹಿಂಬಾಲಿಸಿದ "ಎಲ್ಲರೂ" ನಾಶವಾಗಿ ಹೋದರು. ಆದರೆ ಯೆಹೋವನನ್ನು ಹೊಂದಿಕೊಂಡ ಪ್ರತಿಯೊಬ್ಬನು ಉಳಿದುಕೊಂಡಿದ್ದೀರಿ. ಮಧ್ಯರಸ್ತೆ ಆಗಲೂ ಇರಲಿಲ್ಲ, ಈಗಲೂ ಇಲ್ಲ. ನಾವು ಕರ್ತನಿಗಾಗಿ ಅಥವಾ ಆತನ ವಿರುದ್ಧವಾಗಿರುತ್ತೇವೆ. ಹೊಂದಿಕೊಂಡ ಎಂಬ ಪದವು ಮತ್ತೆ (ಮತ್ತಾಯ 12:30) ಕಂಡುಬಂದಿದೆ. "ಪುರುಷನು ತನ್ನ ತಂದೆ ತಾಯಿಗಳನ್ನು ಬಿಟ್ಟು ತನ್ನ ಹೆಂಡತಿಯನ್ನು ಸೇರಿಕೊಳ್ಳುವನು" ಆದಿಕಾಂಡ 2:24ರಲ್ಲಿ ಬಿಟ್ಟು ತನ್ನ ಪತ್ನಿಯನ್ನು ಸೇರಿಕೊಳ್ಳುವನು.

ರೂತಳು 1:14ಅನ್ನು ನೋಡಿ. ಈ ಹಿನ್ನೆಲೆಯಲ್ಲಿ ಇನ್ನು ನಾಲ್ಕು ಬಾರಿ ಧರ್ಮೋಪದೇಶಕಾಂಡದಲ್ಲಿ ಕಂಡುಬರುತ್ತದೆ (ಧರ್ಮೋಪದೇಶ 10:20, ಧರ್ಮೋ 11:22, ಧರ್ಮೋ 13:4, ಧರ್ಮೋ 30:20) ಪ್ರತಿಯೊಂದು ಸನ್ನಿವೇಶದಲ್ಲೂ ಒಂದೇ ಆಲೋಚನೆ ಎಲ್ಲಾ ಜನರು ತಮ್ಮ ದೇವರಿಗೆ ಹೊಂದಿಕೊಂಡಿರತಕ್ಕದ್ದು. ತಮ್ಮನ್ನು ದೇವರಿಗೆ ಕೊಟ್ಟು ಮತ್ತು ಆತನಿಂದ ಶಕ್ತಿಯನ್ನು ಮತ್ತು ಬಲವನ್ನು ಪಡೆಯತಕ್ಕದ್ದು.

ಇಲ್ಲಿ ಯಾವುದು ಮುಖ್ಯವೆಂದರೆ ಜನರು. ಅವರೇ ಸ್ವತಃ ಹೊಂದಿಕೊಳ್ಳಬೇಕು. ದೇವರಿಗೆ ಹೊಂದಿಕೊಳ್ಳಲು ಅವರೇ ಆಯ್ಕೆ ಮಾಡಬೇಕು ಮತ್ತು ಆತನ ಶಕ್ತಿಯಿಂದ ಮತ್ತು ಬಲದಿಂದ ಪಾಪಕ್ಕೆ ಒಳಗಾಗದ ಹಾಗೆ ತಡೆಯಬೇಕು.

ಯೂದ 24 ಮತ್ತು 1 ಕೊರಿಂಥದವರಿಗೆ 10:13 ಅನ್ನು ಓದಿ. ಧರ್ಮೋಪದೇಶ–ಕಾಂಡ 13:4ರಲ್ಲಿ ಕಂಡುಬರುವುದನ್ನು ಇಲ್ಲಿ ಹೊಸ ಒಡಂಬಡಿಕೆಯಲ್ಲಿ ಏನೆಂದು ಹೇಳಿದೆ?

ದೇವರು ನಂಬಿಗಸ್ತನು. ದೇವರು ನಾವು ಬೀಳದಂತೆ ಕಾಯುವನು. ಆದರೆ ನಾವು ಪ್ರಜ್ಞೆಯುಳ್ಳ ಆಯ್ಕೆ ಮಾಡತಕ್ಕದ್ದು. ಪೆಗೊರನ ಬಾಳನ ವಿಷಯದಲ್ಲಿ ನಂಬಿಗಸ್ತರು ಮಾಡಿದ ಹಾಗೆ ದೇವರಿಗೆ ಹೊಂದಿಕೊಳ್ಳಬೇಕು. ಹಾಗಿದ್ದರೆ ನಾವು ಶೋಧನೆಗೆ ಒಳಗಾಗದ ಹಾಗೆ ಇರಲು ಭರವಸೆಯುಳ್ಳವರಾಗಬಹುದು. ನಾವು ನಂಬಿಗಸ್ತರಾಗಿರಬಹುದು.

ಹೇಗೆ, ಪ್ರಾರ್ಥನೆ ಸತ್ಯವೇದದ ಅಧ್ಯಯನ, ಆರಾಧನೆ ಮತ್ತು ಸಹಬಾಳ್ವೆ ದೇವರೊಂದಿಗೆ ಹೊಂದಿಕೊಂಡಿರಲು ಸಹಾಯ ಮಾಡುತ್ತದೆ?

ಬುಧವಾರ ನವೆಂಬರ್ 3

## ಇದಕ್ಕಿಂತಲೂ ಶ್ರೇಷ್ಠವಾದ ಜನಾಂಗ ಉಂಟೋ?

ಧರ್ಮೋಪದೇಶಕಾಂಡ 4:4 ವಚನದ ನಂತರ ಬರುವ ವಚನಗಳು ಸತ್ಯವೇದದಲ್ಲೇ ಅತಿ ಗಹನವಾದ ಮತ್ತು ಸುಂದರವಾದ ವಚನಗಳಾಗಿವೆ. ಧರ್ಮೋಪದೇಶಕಾಂಡದಲ್ಲಿ ಕಂಡುಬರುವ ಸಂದೇಶವು ಈ ವಚನದಲ್ಲಿಯೇ ಇದೆ, ಎಂದು ಒಬ್ಬನು ವಾದಿಸಬಹುದು ಮಿಕ್ಕಿದ್ದೆಲ್ಲ ಬರೀ ವ್ಯಾಖ್ಯಾನ ಮಾತ್ರ. ಈ ವಚನಗಳನ್ನು ಓದುವಾಗ ಈ ತತ್ವಗಳನ್ನು ಹೇಗೆ ನಮ್ಮ ಜೀವನದಲ್ಲಿ ಇಂದು ಅಳವಡಿಸಿಕೊಳ್ಳಲು ಸಾಧ್ಯ ಎಂದು ಯೋಚಿಸಿರಿ.

ಧರ್ಮೋಪದೇಶಕಾಂಡ 4:5–9 ಅನ್ನು ಓದಿ. ಇಲ್ಲಿ ಇಸ್ರಾಯೇಲ್ಯರಿಗೆ ಏನು ಮಾಡಿದನೋ, ಯಾಕೆ ಕರ್ತನು ಮೋಶೆಯ ಮುಖಾಂತರ ಹೇಳಿದ?

ಅವರನ್ನು ಕರೆದದ್ದು ಅಥವಾ ಆರಿಸಿಕೊಂಡದ್ದು ಒಂದು ವಿಶೇಷ ಕಾರಣಕ್ಕಾಗಿ ಎಂದು ಅವರು ಮನವರಿಕೆ ಮಾಡಿಕೊಳ್ಳಲು ಕರ್ತನು ಬಯಸಿದನು. ದೇವರು ಹೇಳಿದ ಹಾಗೆ ಅವರು "ಮಹಾ" ರಾಷ್ಟ್ರ ಎಂದು ದೇವರು ಅಬ್ರಹಾಮನಿಗೆ ಪ್ರಾರಂಭದಲ್ಲೇ ಹೇಳಿ ಅವರನ್ನು ಕಸ್ದಿಯರಿಂದ ಹೊರಗೆ ಕರೆದ. "ನಾನು ನಿನ್ನನ್ನು ದೊಡ್ಡ ಜನಾಂಗವಾಗುವಂತೆ ಮಾಡುತ್ತೇನೆ" (ಆದಿಕಾಂಡ 12:2). ಆದರೆ ಅವರನ್ನು ದೊಡ್ಡ ಜನಾಂಗವಾಗಿ ಮಾಡಿದ ಉದ್ದೇಶ "ಭೂಮಿಯ ಎಲ್ಲಾ ಕುಟುಂಬಗಳಿಗೆ" ಆಶೀರ್ವಾದ ಆಗುವ ಸಲುವಾಗಿ (ಆದಿ 12:2) (ಆದಿ 12:3).

ಅಂತಿಮ ಆಶೀರ್ವಾದವೇನೆಂದರೆ ಯೇಸುಕ್ರಿಸ್ತನು ಮೆಸ್ಸೀಯನಾಗಿ ಅವರ ರಕ್ತಸಂಬಂಧವಾಗಿ ಬರುವ ತನಕ ಅವರು ಲೋಕಕ್ಕೆ ಬೆಳಕಾಗಬೇಕಿತ್ತು. "ನನ್ನ ರಕ್ಷಣೆಯು ಲೋಕದ ಕಟ್ಟಕಡೆಯವರೆಗೆ ವ್ಯಾಪಿಸುವಂತೆ ನಿನ್ನನ್ನು ಅನ್ಯ ಜನಾಂಗಗಳಿಗೂ ಬೆಳಕನ್ನಾಗಿ ದಯಪಾಲಿಸುವೆನು" (ಯೆಶಾಯ 49:6). ರಕ್ಷಣೆಯು ಅವರಿಂದ ಅಲ್ಲ. ಆದರೆ ಸತ್ಯದೇವರು, ರಕ್ಷಿಸಲು ಶಕ್ತನಾದ ಅವನೊಬ್ಬನೇ ಅವರ ಮುಖಾಂತರ ಪ್ರಕಟಗೊಳ್ಳಬೇಕಿತ್ತು. ಬ್ರಹ್ಮಾಂಡವನ್ನು ಸೃಷ್ಟಿಸಿದ ದೇವರನ್ನು ಇಸ್ರಾಯೇಲ್ಯರು ಆರಾಧಿಸಿ ಮತ್ತು ಸೇವಿಸುತ್ತಿದ್ದಾರೆ. ಭೂಲೋಕ ಪರಲೋಕದ ಕರ್ತನು, ಅನ್ಯರು ಬಂಡೆಗಳನ್ನು ಕಲ್ಲುಗಳನ್ನು, ಮರಗಳನ್ನು ಮತ್ತು ಪ್ರೇತಗಳನ್ನು ಆರಾಧಿಸುತ್ತಿದ್ದರು (ಧರ್ಮೋಪದೇಶಕಾಂಡ 32:17, ಕೀರ್ತನೆಗಳು 106:37).

ಎಂಥಾ ಸುಸ್ಪಷ್ಟವಾದ ವ್ಯತ್ಯಾಸ!

ಇಸ್ರಾಯೇಲ್ಯರನ್ನು ವಿಶೇಷವಾದವರೆಂದು ತಿಳಿಸುವ ಎರಡು ವಚನಗಳನ್ನು ಮೋಶೆಯು ತಿಳಿಸಿದ್ದಾನೆ. ಮೊದಲನೆಯದು ಕರ್ತನು ಅವರಿಗೆ ಸಮೀಪವಾಗಿದ್ದನು. ಪರ್ಣಶಾಲೆಯ ಮುಖಾಂತರ ಅಸಾಮಾನ್ಯವಾದ ರೀತಿಯಲ್ಲಿ ಎರಡನೆಯದು ಆತನ ಎಲ್ಲಾ ಆಜ್ಞೆಗಳಲ್ಲಿ ನೈತಿಕವಾದ ತೀರ್ಪು ಮತ್ತು ಕಟ್ಟಳೆಗಳು ಉಂಟು.

ಧರ್ಮೋಪದೇಶಕಾಂಡ 4:32–35 ಅನ್ನು ಓದಿ.

ಅವರಿಗೆ ವಿಶೇಷವಾದ ಕರೆಯುವಿಕೆ ಇದೆ ಎಂದು ಮನವರಿಕೆ ಮಾಡಲು ಕರ್ತನು ಮತ್ತೆ ಯಾವ ವಿಷಯವನ್ನು ಹೇಳಿದನು?

ಇಸ್ರಾಯೇಲ್ಯರಿಗೆ ಬಹಳಷ್ಟು ಕೊಟ್ಟಿರುವುದಲ್ಲಿ ಪ್ರಶ್ನೆಯೇ ಇಲ್ಲ. ಈಗ ಅವರು ಹೇಗೆ ಪ್ರತಿಕ್ರಿಯೆ ತೋರಿಸಿದರು?

**ಗುರುವಾರ** **ನವೆಂಬರ್ 4**

## ನಿನ್ನ ಜ್ಞಾನ ಮತ್ತು ನಿನ್ನ ತಿಳುವಳಿಕೆ

ನಾವು ನೋಡಿದ ಹಾಗೆ ಧರ್ಮೋಪದೇಶಕಾಂಡ 4:1–9 ವಚನಗಳು ಅಧಿಕ ಬಲವುಳ್ಳ ನಿರೂಪಿಸಿರುವುದು ರಾಜ್ಯದ ವಿಶೇಷ ಸ್ಥಾನವನ್ನು ತೋರಿಸುವುದಕ್ಕೆ ಮಾತ್ರವಲ್ಲ. ಆದರೆ ಅವರನ್ನು ಸೇವೆಯ ಕರೆಯುವಿಕೆಗೂ. ಈ ಎಲ್ಲಾ ವಚನಗಳಲ್ಲಿ ಒಂದೇ ಆಲೋಚನೆ ದಾತುವಾಗಿದೆ. ಮೂಲ ಉದ್ದೇಶ ಏನೆಂದರೆ ಅವರು ವಿದೇಯುರಾಗಬೇಕು. ಅನುಸರಿಸಬೇಕು, ದೇವರು ಹೇಳಿರುವುದನ್ನು ಮಾಡಬೇಕೆಂಬುದೇ.

ಮತ್ತೆ ಧರ್ಮೋಪದೇಶಕಾಂಡ 4:6 ಅನ್ನು ಓದಿ.

ಈ ಜನಾಂಗ ದೃಷ್ಟಿಯಲ್ಲಿ "ಜ್ಞಾನ" ಮತ್ತು "ತಿಳುವಳಿಕೆ"ಯನ್ನು ಕುರಿತು ಕರ್ತನು ವಿಶೇಷವಾಗಿ ಹೇಳುವುದೇನು?

ಕಟ್ಟಳೆ ಮತ್ತು ನ್ಯಾಯ ತೀರ್ಪುಗಳನ್ನು ಪ್ರಥಮ ದೃಷ್ಟಿಯಲ್ಲಿ ಅದರಲ್ಲಿಯೇ ಜ್ಞಾನ ಮತ್ತು ತಿಳುವಳಿಕೆಗಳು ಇದೆ ಎಂದು ಕಾಣುತ್ತದೆ. ಆದರೆ ವಚನವು ಹಾಗೆ ಹೇಳುವುದಿಲ್ಲ. ಕರ್ತನು ಅವರಿಗೆ ಕಟ್ಟಳೆ ಮತ್ತು ನ್ಯಾಯಶಾಸನಗಳನ್ನು ಕಲಿಸಿದನು.

ಹೌದು ಜ್ಞಾನ ಮತ್ತು ತಿಳುವಳಿಕೆಗಳು ಆಜ್ಞೆಗಳಿಗೆ ವಿದೇಯರಾದಾಗ ಮಾತ್ರ ಬರುತ್ತವೆ.

ಲೋಕದವರು ಕಾಣದಿರುವಂತೆ ಅತಿ ಉತ್ತಮವಾದ ನಿಯಮ ನಿಬಂಧನೆ ಮತ್ತು ಕಾನೂನುಗಳನ್ನು ಇಸ್ರಾಯೇಲ್ ಹೊಂದಿದ್ದರು. ಆದರೆ ಅವರು ಅದನ್ನು ಅನುಸರಿಸದಿದ್ದರೆ ಯಾವ ಪ್ರಯೋಜನ? ಅವರ ಜ್ಞಾನ ಮತ್ತು ತಿಳುವಳಿಕೆಯು ಬಂದದ್ದು ಅವರು ಅದನ್ನು ತಮ್ಮ ಜೀವಿತದಲ್ಲಿ ಪ್ರದರ್ಶನ ಮಾಡುವಾಗ ಮಾತ್ರ. ದೇವರು ಅವರಿಗೆ ಕೊಟ್ಟ ಸತ್ಯವನ್ನು ಪರಿಪಾಲಿಸಲು ಸಾಧ್ಯ ಹೇಗೆಂದರೆ ಅವರು ಆಜ್ಞೆಗಳಿಗೆ ವಿದೇಯರಾಗಬೇಕಿತ್ತು. ಅವರು ಆ ಸತ್ಯಕ್ಕೆ ಅನುಗುಣವಾಗಿ ಜೀವಿಸಿದ್ದರೆ ಆ ಬೆಳಕು ಮತ್ತು ಎಲ್ಲಾ ಸತ್ಯವು ಅವರಿಗೂ ಮತ್ತು ಅನ್ಯರಿಗೂ ಯಾವ ಒಳ್ಳೆದಾಗುತ್ತಿರಲಿಲ್ಲ. ಆದುದರಿಂದ ಪದೇ ಪದೇ ಅವರನ್ನು ವಿಧೇಯತ್ವಕ್ಕೆ ಕರೆಯಲಾಯಿತು. ಅವರು ನಿಯಮಗಳಿಗೆ ಮತ್ತು ನ್ಯಾಯತೀರ್ಪುಗಳಿಗೆ ವಿಧೇಯರಾಗಿದ್ದರೆ ಅವರು ಲೋಕಕ್ಕೆ ಬೆಳಕಾಗುತ್ತಿದ್ದರು. "ಲೋಕದ ಎಲ್ಲಾ ಜನಾಂಗದವರಿಗೆ ಅವರು ದೇವರ ಕಟ್ಟಳೆಗೆ ವಿಧೇಯರಾಗಿದ್ದರೆ ಅವರು ಲೋಕದವರಿಗೆ ಆಶ್ಚರ್ಯವನ್ನು ಉಂಟುಮಾಡುತ್ತಿದ್ದರು. ಅವರಿಗೆ ಜ್ಞಾನ ಮತ್ತು ಕೌಶಲ್ಯವನ್ನು ಕೊಡುವ ದೇವರು ಅವರ ಗುರುವಾಗಬಹುದಿತ್ತು. ಮತ್ತು ಅವರು ವಿಧೇಯರಾಗಿದ್ದರೆ ಅವರನ್ನು ಘನವಂತರು ಮತ್ತು ಎಲ್ಲರಿಗಿಂತಲೂ ಎತ್ತರದಲ್ಲಿ ಇಡುತ್ತಿದ್ದರು. ಅವರು ದೇವರಿಗೆ ವಿಧೇಯರಾಗಿದ್ದರೆ ಇತರ ಜನಾಂಗದವರಿಗೆ ತಗಲಿದ ಯಾವ ರೋಗವು ಅವರನ್ನು ತಗುಲುತ್ತಿರಲಿಲ್ಲ ಮತ್ತು ಬೌದ್ಧಿಕವಾಗಿ ಮತ್ತು ಶಕ್ತಿಯಿಂದಲೂ ಆಶೀರ್ವದಿಸಲ್ಪಡುತ್ತಿದ್ದರು. ಅವರ ಅಭಿವೃದ್ಧಿಯಿಂದ ಅವನ ಘನತೆ ಮತ್ತು ಶಕ್ತಿಯು ಪ್ರಕಟವಾಗಿ ದೇವರಿಗೆ ಮಹಿಮೆ ಉಂಟಾಗುತ್ತಿತ್ತು. ಅವರು ರಾಜವಂಶದ ಯಾಜಕರು ಮತ್ತು ಅರಸರು ಆಗಬೇಕಿತ್ತು. ದೇವರು ಅವರು ಲೋಕದಲ್ಲೇ ಅತಿಶ್ರೇಷ್ಠ ಜನಾಂಗವಾಗಲು ಅನುಕೂಲ ಮಾಡಿದ.

ಎಲೆನ್ ಜಿ ವೈಟ್ ಕ್ರೈಸ್ಟ್ ಆಬ್ಜೆಕ್ಟ್ ಲೆಸೆನ್ಸ್, 288, ಮತ್ತಾಯ 5:13–16 ಅನ್ನು ಓದಿ. ಪುರಾತನ ಇಸ್ರಾಯೇಲ್ಯರಿಗೆ ಹೇಳಿದ ಯಾವ ಮಾತುಗಳು ಈ ವಚನಗಳಲ್ಲಿ ಯೇಸುಕ್ರಿಸ್ತನು ನಮಗೆ ಹೇಳಿರುವ, ಅದೇ ಮಾತನ್ನು ಪ್ರತಿಬಿಂಬಿಸುತ್ತದೆ? ಸೆವೆಂತ್ ಡೇ ಅಡ್ವೆಂಟಿಸ್ಟರಾದ ನಮಗೆ ಹೇಗೆ ಅನ್ವಯಿಸುತ್ತದೆ?

**ಶುಕ್ರವಾರ** **ನವೆಂಬರ್ 5**

**ಹೆಚ್ಚಿನ ಆಲೋಚನೆ :** ಪರಲೋಕದಲ್ಲಿ ಮಹಾಹೋರಾಟ ಪ್ರಾರಂಭವಾದಾಗಿನಿಂದ ಸೈತಾನನ ಉದ್ದೇಶವು ಏನೆಂದರೆ ದೇವರ ಆಜ್ಞೆಯನ್ನು ಉರುಳಿಸಲು ಪ್ರಯತ್ನ ನಡಿಸಿದ. ಇದನ್ನು ನೆರವೇರಿಸಲು ಸೈತಾನನು ತನ್ನ ಸೃಷ್ಟಿಕರ್ತನಿಗೆ ವಿರುದ್ಧವಾಗಿ ಪ್ರತಿಭಟಿಸಿದ. ಆತನನ್ನು ಪರಲೋಕದಿಂದ ದೊಬ್ಬಿದರು. ಈ ಲೋಕದಲ್ಲಿ ಅದೇ ಹೋರಾಟವನ್ನು ಮುಂದುವರಿಸಿದ್ದಾನೆ. ಮನುಷ್ಯರನ್ನು ವಂಚಿಸಿ ದೇವರ ಆಜ್ಞೆಗಳನ್ನು ಉಲ್ಲಂಘಿಸಲು ಒಂದೇ ಗುರಿಯಿಂದ ಸತತವಾಗಿ ಮುಂದುವರಿದಿದ್ದಾನೆ. ಆಜ್ಞೆಗಳನ್ನು ಸಂಪೂರ್ಣವಾಗಿ ತೆಗೆದುಹಾಕುವುದರಿಂದ ಅಥವಾ ಅದರಲ್ಲಿ ಒಂದನ್ನಾದರೂ ಮುರಿದರೆ ಅದೇ ಪರಿಣಾಮ "ಯಾಕೆಂದರೆ ಯಾವನಾದರೂ ಧರ್ಮಶಾಸ್ತ್ರವನ್ನೆಲ್ಲಾ ಕೈಕೊಂಡು ನಡೆದು ಒಂದೇ ಒಂದರಲ್ಲಿ ತಪ್ಪಿದರೆ ಅವನು ಎಲ್ಲಾ ವಿಷಯದಲ್ಲಿಯೂ ಅಪರಾಧಯಾಗುತ್ತಾನೆ" (ಯಾಕೋಬ 2:10).

ಎಲೆನ್ ಜಿ ವೈಟ್ ಮಹಾಹೋರಾಟ ಪುಟ 582 ಪೇಗೋರನ ಬಾಳನ ವಿಷಯದಲ್ಲಿ ಇ.ಜಿ. ವೈಟ್ ಹೀಗೆ ಬರೆದಿದ್ದಾರೆ "ನಿಷೇಧಿಸಿದ ಭೂಮಿಯ ಮೇಲೆ ಅವರ ಸಾಹಸ ಮಾಡಿ ಸೈತಾನನ ವಂಚನೆಗೆ ಸಿಕ್ಕಿಬಿದ್ದರು. ಗಾಯನ ಮತ್ತು ನೃತ್ಯಗಳಿಗೆ ಮೋಸಹೋಗಿ ಮತ್ತು ಅನ್ಯದೇವತೆಗಳ ಸೌಂದರ್ಯಕ್ಕೆ ಮೋಹಗೊಂಡು ಯೆಹೋವ ದೇವರ ಸ್ವಾಮಿನಿಷ್ಠೆಯನ್ನು ತ್ಯಜಿಸಿದನು. ಅವರ ಆನಂದ ಮತ್ತು ಉತ್ಸವಗಳ ಒಂದಾಗಿ ಪಾನಮತ್ತರಾದ ಪ್ರಯುಕ್ತವಾಗಿ ಅವರ ಮನಸ್ಸು ಮಂಕಾಗಿ ಸ್ವನಿಯಂತ್ರಣವನ್ನು ಕಳೆದುಕೊಂಡರು. ಮೋಹದಿಂದ ತುಂಬಿದವರಾಗಿ ಅವರ ಮನಸ್ಸಾಕ್ಷಿಯನ್ನು ಪಟಿಂಗತನದಿಂದ ಕೆಡಿಸಿಕೊಂಡು ಮತ್ತು ಅವರು ವಿಗ್ರಹಗಳಿಗೆ ಶರಣಾದರು. ಅನ್ಯಬಲಿಪೀಠಗಳ ಯಜ್ಞಗಳನ್ನು ಅರ್ಪಿಸಿದರು ಮತ್ತು ತುಚ್ಛವಾದ ಆಚರಣೆಗಳಲ್ಲಿ ಪಾಲ್ಗೊಂಡರು" ಎಲೆನ್ ಜಿ ವೈಟ್, ಪೇಟ್ರಿಯಾರ್ಕ್ಸ್ ಮತ್ತು ಪ್ರಾಫೆಟ್ಸ್, ಪುಟ 454.